ಉರಿಯೂತವನ್ನು ಶಂಕಿಸಬೇಕಾಗುತ್ತದೆ. ಮಿದುಳು ದ್ರವದ ಪರೀಕ್ಷೆಯ ಮೂಲಕ ಸೋಂಕನ್ನು ದೃಢೀಕರಿಸಿ ಸೂಕ್ತ ಚಿಕಿತ್ಸೆ ನೀಡದಿದ್ದರೆ ಮಗುವಿನಲ್ಲಿ ಹಲವಾರು ದೈಹಿಕ ವೈಕಲ್ಯಗಳುಂಟಾಗಬಹುದು ಇಲ್ಲವೆ ಸಾವು ಸಂಭವಿಸಬಹುದು. ಆದ್ದರಿಂದ ಪುಟ್ಟ ಮಗುವಿನಲ್ಲಿ ಜ್ವರದೊಂದಿಗೆ ಫಿಟ್ಸ್ ಬಂದರೆ ಅನಗತ್ಯ ಗಾಬರಿಗೊಳಗಾಗದೆ ತಕ್ಷಣ ವೈದ್ಯರ ಬಳಿ ತೋರಿಸಿ ಸೂಕ್ತ ಚಿಕಿತ್ಸೆ ನೀಡಬೇಕು. ಅದು 'ಜ್ವರದ ಫಿಟ್ಸ್' ಆಗಿದ್ದರೆ ಜ್ವರದ ತಾಪ ಕಡಿಮೆಯಾಗಿಸುವಂಥ ಔಷಧಗಳನ್ನು ಬಳಸಬೇಕು. ಪೆಂಟಾವಲೆಂಟ್, ನ್ಯೂಮೋಕಾಕಲ್ ಮತ್ತು ಮೆನಿಂಗೋಕಾಕಲ್ ಲಸಿಕೆಗಳು ಮಿದುಳುಪೊರೆಯ ಸೋಂಕಿನ ವಿರುದ್ಧ ರಕ್ಷಣೆ ನೀಡಬಲ್ಲವು.

### ಅತಿಸಾರ ಭೇದಿ

ಎದೆಹಾಲೂಡಿಸುವ ಶಿಶುಗಳಲ್ಲಿ ಸಾಮಾನ್ಯವಾಗಿ ಅತಿಸಾರ ಭೇದಿಯ ಸಮಸ್ಯೆ ಅಷ್ಟಾಗಿ ಕಾಡುವುದಿಲ್ಲ. ಮೇಲಿನ ಹಾಲು ಕುಡಿಸುವ ಮತ್ತು ಬಾಟಲಿಯಲ್ಲಿ ಹಾಲು ಕುಡಿಸುವ ಅಭ್ಯಾಸಗಳಿಂದ ಅತಿಸಾರ ಭೇದಿ ಉಂಟಾಗಬಹುದು ಮತ್ತು ಇದು ಹೆಚ್ಚಿನ ಸಂದರ್ಭದಲ್ಲಿ ರೋಟಾ ವೈರಾಣುವಿನಿಂದುಂಟಾಗುವ ಭೇದಿಯಾಗಿರುತ್ತದೆ. ರೋಟಾ ವೈರಾಣು ವಿರುದ್ಧದ ಲಸಿಕೆ ನೀಡಿಕೆಯಿಂದ ಇದನ್ನು ತಡೆಗಟ್ಟಬಹುದು. ನನ್ನಲ್ಲಿ ಬರುವ ಅನೇಕ ಹೆತ್ತವರು 'ಮಗುವಿಗೆ ಹಲ್ಲು ಮೂಡುತ್ತಿರುವುದರಿಂದ ಭೇದಿಯಾಗುತ್ತಿದೆ' ಎಂದು ಹೇಳುತ್ತಿರುತ್ತಾರೆ. ಆದರೆ ವಾಸ್ತವವಾಗಿ ಹಲ್ಲು ಮೂಡುವುದಕ್ಕೂ ಭೇದಿಗೂ ನೇರ ಸಂಬಂಧವಿರುವುದಿಲ್ಲ. ಹಲ್ಲು ಮೂಡುವ ಸಮಯದಲ್ಲಿ ಮಗು ಸಿಕ್ಕಿದ್ದನ್ನೆಲ್ಲಾ ಬಾಯಿಗಿಟ್ಟುಕೊಳ್ಳುವುದರಿಂದ ಕೆಲವು ಮಕ್ಕಳಲ್ಲಿ ಕರುಳಿನ ಸೋಂಕುಂಟಾಗಿ ಭೇದಿಯಾಗಬಹುದು. ಭೇದಿಯಾದ ಮಕ್ಕಳಿಗೆ 'ಭೇದಿ ಜೋಡಿ' ಎಂದೇ ಪರಿಗಣಿಸಲಾಗಿರುವ 'ಸತು' ಮತ್ತು 'ಓಆರ್‌ಎಸ್' ಅನ್ನು ವೈದ್ಯರ ಸಲಹೆಯ ಮೇರೆಗೆ ನೀಡಬೇಕು. ಆಹಾರ, ನೀರು ಮತ್ತು ಪರಿಸರದ ಸ್ವಚ್ಛತೆ ಮಗುವಿನಲ್ಲಿ ಭೇದಿಯುಂಟಾಗದಂತೆ ತಡೆಗಟ್ಟಬಲ್ಲವು.

### ನ್ಯುಮೋನಿಯಾ

ಇನ್‌ಫ್ಲುಯೆಂಜಾ, ಅಡಿನೊ, ಕೊರೊನಾ ಮುಂತಾದ ವೈರಾಣುಗಳು ಮತ್ತು ಸ್ಟೆಫಲೋಕಾಕ್ಕೆ, ನ್ಯೂಮೋಕಾಕ್ಕೆ ಮುಂತಾದ ಬ್ಯಾಕ್ಟೀರಿಯಾಗಳಿಂದ ಶ್ವಾಸಕೋಶದ ಸೋಂಕುಂಟಾಗಬಹುದು. ಜ್ವರ, ಕೆಮ್ಮು, ಪಕ್ಕೆಯೆಳೆತ ಮುಂತಾದವು ನ್ಯುಮೋನಿಯಾದ ಲಕ್ಷಣಗಳು. ನ್ಯುಮೋನಿಯಾದಿಂದ ಶರೀರದಲ್ಲಿ ಆಮ್ಲಜನಕದ ಕೊರತೆಯುಂಟಾಗಿ ಸಾವುನೋವುಗಳು ಸಂಭವಿಸಬಹುದು. ಆದುದರಿಂದ ಮೇಲೆ ಹೇಳಿದ ಲಕ್ಷಣಗಳು ಪುಟ್ಟ ಮಗುವಿನಲ್ಲಿ ಕಾಣಿಸಿಕೊಂಡರೆ ತಡಮಾಡದೆ ವೈದ್ಯರಲ್ಲಿ ತೋರಿಸಿ ಚಿಕಿತ್ಸೆ ಕೊಡಿಸಬೇಕು. ಪೆಂಟಾವಲೆಂಟ್, ನ್ಯೂಮೋಕಾಕಲ್, ಇನ್‌ಫ್ಲುಯೆಂಜಾ ಮತ್ತು ದಡಾರದ ಲಸಿಕೆಗಳು ನ್ಯುಮೋನಿಯಾದ ವಿರುದ್ಧ ರಕ್ಷಣೆ ನೀಡಬಲ್ಲವು. ಹಾಗೆಯೇ ಸ್ತನ್ಯಪಾನ ಕೂಡಾ ನ್ಯುಮೋನಿಯಾ ವಿರುದ್ಧ ರಕ್ಷಣೆ ನೀಡಬಲ್ಲದು.



## ಒಂದರಿಂದ ಮೂರು ವರ್ಷ

ಮಗುವಿನ ಸುರಕ್ಷತೆಯ ದೃಷ್ಟಿಯಿಂದ ಇದು ಅತ್ಯಂತ ಪ್ರಮುಖ ಘಟ್ಟ. ಜಗತ್ತನ್ನು ಕುತೂಹಲದಿಂದ ನೋಡಲಾರಂಭಿಸಿದ ಮಗು, ನಾನಾ ಅವಘಡಗಳಿಗೆ ತನ್ನನ್ನು ತಾನು ಒಡ್ಡಿಕೊಳ್ಳುವ ಸಾಧ್ಯತೆಯಿರುತ್ತದೆ.



### ಆಹಾರ ಪೂರೈಕೆ

ಒಂದು ವರ್ಷ ಪೂರೈಸಿದ ಮಗುವಿಗೆ ಕುಟುಂಬಕ್ಕಾಗಿ ತಯಾರಿಸಿದ ಆಹಾರವನ್ನೇ ನೀಡಬಹುದು. ಆದರೆ ಅದು ಪಿಷ್ಟ, ಪ್ರೊಟೀನ್, ಮೇದಸ್ಸು, ಜೀವಸತ್ವ ಮತ್ತು ಖನಿಜಾಂಶಗಳುಳ್ಳ ಸಮತೋಲನ ಆಹಾರವಾಗಿರಬೇಕು. ಈ ಅವಧಿಯಲ್ಲಿ ಸಾಮಾನ್ಯವಾಗಿ ಮಲಬದ್ಧತೆಯ ಸಮಸ್ಯೆ ತಲೆದೋರುವುದರಿಂದ ಸೊಪ್ಪು ತರಕಾರಿಗಳಂತಹ ನಾರಿನಂಶಯುಕ್ತ ಆಹಾರ ಪದಾರ್ಥಗಳನ್ನು ಯಥೇಚ್ಛವಾಗಿ ನೀಡಬೇಕು.

ಎರಡನೇ ವರ್ಷದ ಅಂತ್ಯದವರೆಗೂ ಮಿದುಳು ತ್ವರಿತವಾಗಿ ಬೆಳವಣಿಗೆ ಹೊಂದುವುದರಿಂದ ಎದೆಹಾಲನ್ನು ಕಡೇ ಪಕ್ಷ ಮಗುವಿಗೆ ಎರಡು ವರ್ಷಗಳು ತುಂಬುವವರೆಗೆ ಮುಂದುವರಿಸಬೇಕು. ಎದೆಹಾಲಿನಲ್ಲಿ ಅಡಕಗೊಂಡಿರುವ ಡಿ ಎಚ್ ಎ, ಇ ಪಿ ಎ ಯಂಥ ಕೊಬ್ಬಿನಾಮ್ಲಗಳು ಮತ್ತು ಸಿಸ್ಟಿನ್, ಟಾರಿನ್‌ನಂಥ ಅಮೈನೊ ಆಮ್ಲಗಳು ಮಿದುಳು ಮತ್ತು ನರಗಳ ಕಾರ್ಯಕ್ಷಮತೆಗೆ ಸಹಕಾರಿಯಾಗಬಲ್ಲವು. ಸಾಕಷ್ಟು ಪ್ರಮಾಣದ ಪರಿಶುದ್ಧ ನೀರನ್ನೂ ಕುಡಿಸುತ್ತಿರಬೇಕು. ಈ ಅವಧಿಯಲ್ಲಿ ಆಹಾರ ಪೂರೈಕೆಯಲ್ಲಿನ ವ್ಯತ್ಯಯದಿಂದ 'ಕ್ವಾಶಿಯೋರ್ಕರ್'ನಂಥ ನ್ಯೂನಪೋಷಣೆ ಉಂಟಾಗುವ ಸಾಧ್ಯತೆಯಿರುತ್ತದೆ. ಕಬ್ಬಿಣಾಂಶ ಕೊರತೆಯಿಂದುಂಟಾಗುವ ರಕ್ತಹೀನತೆಯೂ ಈ ಅವಧಿಯಲ್ಲಿ ಸಾಮಾನ್ಯ. ಜಂತುಹುಳು ಬಾಧೆಯಿಂದಲೂ ಈ ಸಮಸ್ಯೆಗಳು ಉಂಟಾಗಬಹುದಾದ್ದರಿಂದ ನಿಯಮಿತವಾಗಿ ಜಂತುಹುಳು ನಿವಾರಕ ಔಷಧವನ್ನು ನೀಡುತ್ತಿರಬೇಕು.